ನಿರ್ವಹಣೆಗೆ ಕೊಡುವ ಎರಡೂ ಪಟ್ಟಣ ಪಂಚಾಯಿತಿ ಮತ್ತು ಈ ಗ್ರಾಮ ಪಂಚಾಯಿತಿಗಳ ದುಡ್ಡನ್ನು ಸರ್ಕಾರದವರು ಅಲ್ಲೇ ಹಿಡಿದುಕೊಂಡು ತಾವೇ ನಡೆಸಿದ್ದೇ ಆದರೆ ಒಂದು ಅನುಕೂಲವಾಗುತ್ತದೆ ಎನ್ನುವ ಹಿನ್ನೆಲೆಯಲ್ಲಿ ಆ ರೀತಿ ಒಂದು ಮೀಟಿಂಗ್‌ನಲ್ಲಿ ಆಗಿದೆ. ಅದರ ಜೊತೆಗೆ ಮತ್ತೊಂದು ನೀರಿನ ಸಮಸ್ಯೆ ಬಗ್ಗೆ ಹುಕ್ಕೇರಿಯಿಂದ ಹಿರಣ್ಯಕೇಶಿ ನದಿಯಿಂದ 15 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾದರೆ ತುರ್ತು ಯಾವ್ಯಾಗ ಹಿಡಕಲ್ ಡ್ಯಾಮ್‌ನಿಂದ 24–25 ಕಿಲೋಮೀಟರ್‌ನಿಂದ ನೀರೇನು ಬರುತ್ತದೆ, ಅಲ್ಲಿ ಮೋಟಾರು ಸುಟ್ಟುಹೋದಾಗ ಅಲ್ಲಿ ಪೈಪ್‌ಲೈನ್ ಒಡೆದಾಗ 15 ದಿವಸ ಅಲ್ಲಿ ನೀರಿನ ತೊಂದರೆಯಾಗಿ ನಿಲ್ಲುತ್ತದೆ, ಅಲ್ಲಿ ಕುಡಿಯಲಿಕ್ಕೆ ನೀರು ಸಿಗುವುದಿಲ್ಲ, ಈ ಹಿನ್ನೆಲೆಯಲ್ಲಿ ಎರಡು ಕಿಲೋ ಮೀಟರ್ ಒಂದು ಅರ್ಜುನವಾಡ ಹತ್ತಿರ ಹಿರಣ್ಯಕೇಶಿ ಹುಕ್ಕೇರಿಯ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆಯನ್ನು ನಿರ್ಮಿಸಲು ಸರ್ಕಾರದಿಂದ 15 ಲಕ್ಷ ರೂಪಾಯಿಗಳ ಅನುದಾನವನ್ನು ಕೊಟ್ಟರೆ ಸರಿಹೋಗುತ್ತದೆ. ಈಗಾಗಲೇ ಆ ರೀತಿ ಸಂಕೇಶ್ವರ ಪಟ್ಟಣಕ್ಕೆ ಈಗಾಗಲೇ ಒಂದು ನೀರಿನ ವ್ಯವಸ್ಥೆಯನ್ನು ಮಾಡಿದ್ದಾರೆ. ಅಲ್ಲಿ ಬಾಂದಾರದಿಂದ ಮೇಲಿಂದ ಮೇಲೆ ಯಾವಾಗ ಮೋಟಾರ್ ಸುಟ್ಟು ತೊಂದರೆಯಾಗುತ್ತದೆ, ತುರ್ತಾಗಿ ಅದನ್ನು ನಡೆಸುವ ಸಲುವಾಗಿ ಒಂದು ಯೋಜನೆಯನ್ನು ಮಾಡಿದ್ದಾರೆ, ಅದೇ ರೀತಿ ನನಗೆ ಅಲ್ಲಿಯ ಪಟ್ಟಣ ಪಂಚಾಯಿತಿಯವರು ಒಂದು ವರದಿಯನ್ನು ಈಗ ಕೊಟ್ಟಿದ್ದಾರೆ. ಎಂಟು ಇಂಚು ಪಿವಿಸಿ ಪೈಪ್‌ಲೈನನ್ನು ಹಾಕಿ ಒಂದರಿಂದ ಎರಡು ಕಿಲೋ ಮೀಟರ್ ದೂರದಿಂದ ನೀರನ್ನು ತರುವಂಥ ಒಂದು ವಿಚಾರವನ್ನು ಮಾಡಿದರೆ ಇದು ಸುವ್ಯವಸ್ಥಿತವಾಗುತ್ತದೆ ಎನ್ನುವ ಹಿನ್ನೆಲೆಯಲ್ಲಿ ತಾವು ಈ ನಿಟ್ಟಿನಲ್ಲಿ ಒಂದು ಕ್ರಮವನ್ನು ತೆಗೆದುಕೊಳ್ಳಬೇಕು. ಅಲ್ಲಿ ಪಟ್ಟಣ ಪಂಚಾಯಿತಿಗಳು ಸಾಕಷ್ಟು ಗಟಾರಗಳು ಸಹಿತ ಇರಲಾರದೆ ಈ ನೀರಿನ ತೊಂದರೆ ಇದೆ. ಆ ದೃಷ್ಟಿಯಲ್ಲಿ ನೀರಿನ ನಿರ್ವಹಣೆಯನ್ನು ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)** : ಮಾನ್ಯ ಅಧ್ಯಕ್ಷರೆ ಇದನ್ನು ಪರಿಶೀಲಿಸುತ್ತೇವೆ.

**ಹಾರ್ನಳ್ಳಿ ರಾಮಸ್ವಾಮಿ, ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವುದರ ಬಗ್ಗೆ**

85(14) ಶ್ರೀ ಹೆಚ್. ಆಂಜನೇಯ (ಭರಮಸಾಗರ) : ಮಾನ್ಯ ಮುಖ್ಯಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸರ್ಕಾರವು ರಾಮಸ್ವಾಮಿ ವರದಿಯನ್ನು ಅಂಗೀಕರಿಸಿದೆಯೇ;

ಆ) ಹಾಗಿದ್ದಲ್ಲಿ, ಯಾವ ದಿನಾಂಕದಿಂದ ಅಂಗೀಕರಿಸಲಾಗಿದೆ;

ಇ) ವರದಿಯಲ್ಲಿನ ಶಿಫಾರಸ್ಸುಗಳನ್ನು ಯಾವ ಯಾವ ಇಲಾಖೆಗಳು ಅನುಷ್ಠಾನಗೊಳಿಸಿವೆ?

ಶ್ರೀ ಎನ್. ಧಮಸಿಂಗ್ (ಮುಖ್ಯಮಂತ್ರಿಗಳು) :

ಅ),ಆ) ಶ್ರೀ ಹಾರನಹಳ್ಳಿ ರಾಮಸ್ವಾಮಿ ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಕರ್ನಾಟಕ ಆಡಳಿತ ಸುಧಾರಣೆ ಆಯೋಗವು ತನ್ನ ಮಧ್ಯಂತರ ವರದಿ ದಿನಾಂಕ: 20.1.2001ರಂದು ಹಾಗೂ ಅಂತಿಮ ವರದಿಯನ್ನು 27.12.2001ರಂದು ನೀಡಿದೆ. ಸರ್ಕಾರವು ಈ ಶಿಫಾರಸ್ಸುಗಳನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಂಡಿದೆ.

ಇ) ಸಂಬಂಧಿಸಿದ ಇಲಾಖೆಗಳು ಆಡಳಿತ ಸುಧಾರಣೆ ಆಯೋಗದ ಶಿಫಾರಸ್ಸುಗಳನ್ನು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಿರುವ ಉನ್ನತ ಮಟ್ಟದ ಅಧಿಕಾರಿಗಳ ಸಮಿತಿ ಹಾಗೂ ಸಚಿವ ಸಂಪುಟದ ಉಪ ಸಮಿತಿಯ ಮುಂದೆ ಮಂಡಿಸುತ್ತಿದೆ. ಈ ಎರಡು

ಸಮಿತಿಗಳ ಶಿಫಾರಸ್ಸುಗಳನ್ನು ಪರಿಶೀಲಿಸಿ, ಅವುಗಳನ್ನು ಸಚಿವ ಸಂಪುಟದ ಮುಂದೆ ಮಂಡಿಸಲಾಗುತ್ತಿದೆ. ಈಗಾಗಲೇ ಕೆಲವು ಶಿಫಾರಸ್ಸುಗಳನ್ನು ಸರ್ಕಾರವೇ ಅನುಷ್ಠಾನಗೊಳಿಸಿದೆ. ಅವುಗಳೆಂದರೆ,

ಈ ಕೆಳಕಂಡ ಇಲಾಖೆಗಳು ಕೆಲವೊಂದು ಶಿಫಾರಸ್ಸುಗಳನ್ನು ಈಗಾಗಲೇ ಅನುಷ್ಠಾನಗೊಳಿಸಲಾಗಿದೆ.

1) ವಿಭಾಗಾಧಿಕಾರಿಗಳ ಹುದ್ದೆಗಳನ್ನು ರದ್ದುಗೊಳಿಸಿದ್ದು. ಜಿಲ್ಲಾಧಿಕಾರಿಗಳ ಅಧಿಕಾರವನ್ನು ಹೆಚ್ಚಿಸಿದೆ.

2) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ತನ್ನ ಕ್ಷೇತ್ರ ಇಲಾಖೆಯಾದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯನ್ನು ಪುನರ್ ರಚಿಸಿದೆ.

3) ಕೆಲವೊಂದು ಇಲಾಖೆಗಳು ವಿಭಾಗೀಯ ಮಟ್ಟದ ಹುದ್ದೆಗಳನ್ನು ಮತ್ತು ಕಛೇರಿಗಳನ್ನು ರದ್ದುಗೊಳಿಸಿವೆ.

4) ಸಚಿವಾಲಯದಲ್ಲಿ LAN ಪದ್ಧತಿಯನ್ನು ಜಾರಿಗೊಳಿಸಲಾಗಿದೆ.

5) 'ಇ' ಆಡಳಿತವನ್ನು ಜಾರಿಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

6) ವರ್ಗಾವಣೆ ನೀತಿಯನ್ನು ಜಾರಿಗೊಳಿಸಲಾಗಿದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ (ಮಾನ್ಯ ಹೆಚ್. ಆಂಜನೇಯ ಅವರ ಪರವಾಗಿ) :** ಮಾನ್ಯ ಅಧ್ಯಕ್ಷರೆ, ಹಾರ್ನಳ್ಳಿ ರಾಮಸ್ವಾಮಿ ಅವರ ವರದಿಯ ಪ್ರಕಾರ ಎಷ್ಟು ಇಲಾಖೆಗಳನ್ನು ಮುಚ್ಚಬೇಕಾಗಿತ್ತು? ಅದರಲ್ಲಿ ಮೇಲ್ವರ್ಗದವು ಎಷ್ಟು? ತಾಲ್ಲೂಕು ಲೆವೆಲ್‌ನವು ಎಷ್ಟು? ಜಿಲ್ಲಾ ವಲಯದಲ್ಲಿ ಎಷ್ಟು ಮುಚ್ಚಬೇಕಾಗಿತ್ತು? ಕೇವಲ ಎರಡು ಅಥವಾ ಮೂರು ಇಲಾಖೆಗಳನ್ನು ಮುಚ್ಚುವುದಕ್ಕೆ ಕಾರಣವೇನು? ಮತ್ತೆ ಇದಕ್ಕೆ ಮೊದಲೇ ವಿಭಾಗಾಧಿಕಾರಿಗಳ ಕಛೇರಿಯನ್ನು ಮುಚ್ಚುವ ಜೊತೆಗೆ ಅಸಿಸ್ಟೆಂಟ್ ಕಮಿಷನರ್ ಕಚೇರಿಯನ್ನು ಮುಚ್ಚಬೇಕೆಂದು ಆಗಿರುವುದು ಸರ್ಕಾರಕ್ಕೇನಾದರೂ ಗೊತ್ತಾ? ಒಟ್ಟು ಎಷ್ಟು ಇಲಾಖೆಗಳನ್ನು ಮುಚ್ಚಬೇಕಾಗಿತ್ತು ಎಂಬ ಬಗ್ಗೆ ಉತ್ತರವನ್ನು ಹೇಳಿದರೆ, ಆಮೇಲೆ ಪೂರಕವಾಗಿ ಕೇಳುತ್ತೇನೆ.

**ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) :** ಮಾನ್ಯ ಅಧ್ಯಕ್ಷರೆ, ಹಾರ್ನಳ್ಳಿ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ರಚಿತವಾದ ಆಡಳಿತ ಸುಧಾರಣಾ ಆಯೋಗವು ತಮ್ಮ ಮಧ್ಯಂತರ ವರದಿಯನ್ನು ಕೊಟ್ಟಮೇಲೆ ಈಗಾಗಲೇ ನಾವು ವಿಭಾಗಾಧಿಕಾರಿಗಳ ಹುದ್ದೆಯನ್ನು ರದ್ದುಗೊಳಿಸಿದ್ದೇವೆ. ಜಿಲ್ಲಾಧಿಕಾರಿಗಳ ಅಧಿಕಾರವನ್ನು ಹೆಚ್ಚಿಸಿದ್ದೇವೆ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ತನ್ನ ಕ್ಷೇತ್ರದ ಇಲಾಖೆ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯನ್ನು ಪುನರ್ ರಚಿಸಿದ್ದೇವೆ. ಕೆಲವೊಂದು ಇಲಾಖೆಗಳ ವಿಭಾಗೀಯ ಮಟ್ಟದ ಹುದ್ದೆಗಳು ಮತ್ತು ಕಚೇರಿಗಳನ್ನು ರದ್ದುಗೊಳಿಸಲಾಗಿದೆ. ಸಚಿವಾಲಯದ ಲ್ಯಾನ್ ಪದ್ಧತಿಯನ್ನು ಜಾರಿಗೊಳಿಸಲಾಗಿದೆ. ಈ ಆಡಳಿತವನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ವರ್ಗಾವಣೆ ನೀತಿಯನ್ನು ಜಾರಿಗೊಳಿಸಲಾಗಿದೆ. ಇದರ ಜೊತೆಗೆ ಈ ಸಾಲಿನ ಆಯವ್ಯಯದಲ್ಲೂ ಕೂಡ 2004–05ರಲ್ಲಿ ಮಾನ್ಯ ಸದಸ್ಯರು ಪ್ಯಾರಾ ನಂ. 88 ಮತ್ತು 89 ರಲ್ಲಿ "ಉತ್ತಮ ಆಡಳಿತ ಕಡೆಗೆ" ಎಂಬುದನ್ನು ತಾವು ಓದಿಕೊಳ್ಳಬಹುದು.

## 12.10 ಪಿಎಂ

ಪುಸ್ತಕದ ಪ್ಯಾರಾ 88 "ಅಧಿಕ ವೆಚ್ಚದ ಸಾರ್ವಜನಿಕ ಸೇವೆ ವಿತರಣೆಯು ಬಡ ಜನತೆಗೆ ಹೊರೆಯಾಗುತ್ತಿದೆ. ಈ ನಿಟ್ಟಿನಲ್ಲಿ ಪ್ರತಿಸ್ಪಂದಿಯಾದ ಮತ್ತು ಹೊಣೆಗಾರರೂ ಆಗಿರುವ ಆಡಳಿತವನ್ನು ನೀಡಲು ನಾನು ಪ್ರಯತ್ನಿಸುತ್ತೇನೆ. ಏಕೆಂದರೆ ಈ ಸಾರಿ ಕೂಡ ಕ್ರಮ ತೆಗೆದುಕೊಂಡಿದ್ದೇವೆ. ಪ್ಯಾರಾ 89 :– ಸರ್ಕಾರಿ ಸಿಬ್ಬಂದಿ ಸಂಖ್ಯೆಯ ಸರಿಗಾತ್ರಕ್ಕೆ ಪ್ರಥಮ ಆದ್ಯತೆ. ಎಲ್ಲಾ ಇಲಾಖೆಗಳ ಕಾರ್ಯ ಚಟುವಟಿಕೆಗಳ ಮರು ಪರಿಶೀಲನೆ; ಈ ತರಹ ಆಯವ್ಯಯದಲ್ಲಿ ಕೂಡ ನಾವು ಹೇಳಿದ್ದೇವೆ. ಇದನ್ನು ನಾವು ಹಾರ್ನಳ್ಳಿ ರಾಮಸ್ವಾಮಿಯವರು ಕೊಟ್ಟಂತಹ ವರದಿಯ ಮೇಲೆ ಅನೇಕ ಕ್ರಮಗಳನ್ನು ಜರುಗಿಸಿದ್ದೇವೆ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಮಾನ್ಯ ಅಧ್ಯಕ್ಷರೆ, ನಾನು ಸ್ಪಷ್ಟವಾಗಿ ಹೇಳಿದೆ. ಹಾರ್ನಳ್ಳಿ ರಾಮಸ್ವಾಮಿಯವರು ಎಷ್ಟು ಇಲಾಖೆಗಳನ್ನು ಮುಚ್ಚಬೇಕು ಎಂದು ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ತಾವೆಷ್ಟು ಇಲಾಖೆಗಳನ್ನು ಮುಚ್ಚಿದ್ದೀರಿ ಎಂದು ನಾನು ಕೇಳುವುದು. ನಾವು ವರದಿ ಓದಿಕೊಂಡಿದ್ದೇವೆ. ಅದರ ಮೇಲೆ ಇಲ್ಲಿ ಭಾಷಣ ಮಾಡಿದ್ದೇವೆ. ಇದರಿಂದ ಆರ್ಥಿಕವಾಗಿ ಸರ್ಕಾರಕ್ಕೆ ಎಷ್ಟು ಉಳಿತಾಯ ಆಗುತ್ತದೆ ಎಂದು ಅವರು ಹೇಳಿದ್ದರು. ಆ ಅನುಷ್ಠಾನ ಯಾವ ಮಟ್ಟಕ್ಕೆ ಮಾಡಿದ್ದೀರಿ? ಒಂದೇ ಒಂದು ಡಿವಿಜನಲ್ ಕಮೀಷನರ್ ಆಫೀಸ್ ಮುಚ್ಚುವುದಕ್ಕೆ ಹಾರ್ನಳ್ಳಿ ರಾಮಸ್ವಾಮಿಯವರ ವರದಿಯನ್ನು ಸರ್ಕಾರ ಅನುಷ್ಠಾನ ಗೊಳಿಸಿದೆಯಾ ಎಂದು. ಎಷ್ಟು ಅನುಪಯುಕ್ತ ಇಲಾಖೆಗಳು ಇದ್ದಾವೆ ಎಂದು ಅವರು ಐಡೆಂಟಿಫೈ ಮಾಡಿದ್ದಾರೆ? ಮುಚ್ಚುವುದಕ್ಕೆ ರೆಕ್ಮಂಡ್ ಮಾಡಿದ್ದಾರೆ? ಅದರಲ್ಲಿ ತಾವು ಒಂದೇ ಒಂದು ಇಲಾಖೆಯನ್ನು ಮುಚ್ಚಿ ಇನ್ನೊಂದು ರೀಆರ್ಗನೈಸ್ ಮಾಡಿದ್ದೇವೆ ಎಂದು ಹೇಳುತ್ತಿದ್ದೀರಿ. ಇದರಿಂದ ಸರ್ಕಾರಕ್ಕೆ ಆರ್ಥಿಕವಾಗಿ ಎಷ್ಟು ಆಯಿತು? ಈ ಸಮಿತಿಯನ್ನು ಅಪಾಯಿಂಟ್ ಮಾಡಿದ ಘನತೆ ಏನಾದರೂ ಉಳಿಯಿತ್ತಾ ಎಂಬುದನ್ನು ತಾವು ಹೇಳಬೇಕು.

**ಶ್ರೀ ಕೆ. ಶ್ರೀನಿವಾಸ ಗೌಡ** : ನಾವು ಈಗಾಗಲೇ ಡಿವಿಜನಲ್ ಕಮೀಷನರ್ ಆಫೀಸುಗಳನ್ನು ಮುಚ್ಚಿದ್ದೇವೆ. ಮತ್ತು ಉಳಿದ ಇಲಾಖೆಗಳನ್ನು ಇನ್ನೂ ಮುಚ್ಚಿಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಎಷ್ಟು ಇಲಾಖೆ ಮುಚ್ಚಬೇಕು ಎಂದು ಅವರು ಹೇಳಿದ್ದರು?

**ಶ್ರೀ ಕೆ. ಶ್ರೀನಿವಾಸ ಗೌಡ** : ಅದಕ್ಕೆ ನಾನು ಇನ್ನೂ ಹೆಚ್ಚಿನ ಮಾಹಿತಿಯನ್ನು ತರಿಸಿಕೊಂಡು ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

**ಶ್ರೀ ಜಗದೀಶ ಶೆಟ್ಟರ್** : ಸನ್ಮಾನ್ಯ ಅಧ್ಯಕ್ಷರೆ, ಇವತ್ತೇನು ಈ ಹಾರ್ನಳ್ಳಿ ರಾಮಸ್ವಾಮಿ ವರದಿ ಬಗ್ಗೆ ಪ್ರಶ್ನೆ ಇದೆ, ಇದರಲ್ಲಿ ಮಾನ್ಯ ಮಾಧುಸ್ವಾಮಿಯವರು ಹೇಳಿದಂತಹ ವಿಷಯಗಳನ್ನು ಸರ್ಕಾರ ಸ್ಪಷ್ಟೀಕರಣ ಮಾಡಬೇಕು. ಅದರ ಜೊತೆಗೆ ಇಲ್ಲಿ ವರ್ಗಾವಣೆ ನೀತಿಯನ್ನು ಜಾರಿಗೊಳಿಸಲಾಗಿದೆ ಎಂದು ಹೇಳಿದ್ದೀರಿ. ವರ್ಗಾವಣೆ ನೀತಿ, ಇದು ಯಾವುದೇ ಸರ್ಕಾರ, ಹಿಂದಿನ ಸರ್ಕಾರವೂ ಅನುಷ್ಠಾನ ಮಾಡಲಿಲ್ಲ, ಅಥವಾ ನೀವೂ ಮಾಡುತ್ತಿಲ್ಲ. ಇವತ್ತು ಹೊಸದಾಗಿ ಸರ್ಕಾರ ಬಂದ ಮೇಲೆ ಏನಾದರೂ ಹೊಸದಾಗಿ ವರ್ಗಾವಣೆ ನೀತಿಯನ್ನು ತಾವೇನಾದರೂ ಮಾಡಿದ್ದೀರೋ ಏನೋ ಎಂಬ ಬಗ್ಗೆ ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಇವತ್ತು ಏನಾಗಿದೆ ಎಂದರೆ ನೌಕರರ ವರ್ಗದವರು ಜೂನ್ ಜುಲೈ, ಆಗಸ್ಟ್ ಈ ಮೂರು ತಿಂಗಳು ಬಂದರೆ ಖಾಯಂ ಆಗಿ ಬೆಂಗಳೂರಿನಲ್ಲಿಯೇ ಇರುತ್ತಾರೆ. ಎಲ್ಲಿ ನಮಗೆ ಟ್ರಾನ್ಸ್‌ಫರ್ ಆಗುತ್ತದೇನೋ ಎಂದು ಬೆಂಗಳೂರಿನಲ್ಲೇ ಇರುತ್ತಾರೆ. ಅವರುಗಳು ಅಲ್ಲೆಲ್ಲಾ ಎಂಎಲ್‌ಎಗಳ ಕಡೆಗೆ ಅಡ್ಡಾಡುವಂತಹದು, ಮಿನಿಟ್ಸ್

ತೆಗೆದುಕೊಳ್ಳುವಂತಹ ಪ್ರೆಷರ್ ಇದೆ. ಇವತ್ತು ಎಂಎಲ್‌ಎಗಳ ಮೇಲೂ ಪ್ರೆಷರ್, ನಿಮ್ಮಮೇಲೂ ಪ್ರಷರ್ ಇದೆ. ತಾವು ಏನಾದರೂ ವರ್ಗಾವಣೆ ಬಗ್ಗೆ ಒಂದು ಸ್ಪಷ್ಟವಾದಂತಹ ನೀತಿಯನ್ನು ಮಾಡಿ. ಮೊನ್ನೆ ಮಾನ್ಯ ಪ್ರಧಾನಿಯವರಾದಂತಹ ಡಾ: ಮನಮೋಹನ ಸಿಂಗ್ ಅವರೇ ಎಲ್ಲಾ ರಾಜ್ಯಕ್ಕೂ ಒಂದು ಸೂಚನೆ ಕಳುಹಿಸಿದ್ದಾರೆ. ಅಧಿಕಾರಿ ವರ್ಗದವರಿಗೆ ಒಂದು ಸೆಕ್ಯೂರಿಟಿ ಕೊಡಿ ಎಂದು ಸೂಚನೆ ಕಳುಹಿಸಿದ್ದಾರೆ. ಸೆಕ್ಯೂರಿಟಿ ಕೊಟ್ಟಿಲ್ಲ. ಟ್ರಾನ್ಸ್‌ಫರ್ ಮಾಡುವುದನ್ನು ಬ್ಯಾನ್ ಮಾಡಿ. ಸೆಕ್ಯೂರಿಟಿ ಬೇಕು. ಇಲ್ಲ ಎಂದರೆ ಮೂರು ತಿಂಗಳು ಬೆಂಗಳೂರಿನಲ್ಲಿಯೇ ಎಲ್ಲಾ ನೌಕರದಾರರು ಇರುತ್ತಾರೆ. ಅದರ ಬಗ್ಗೆ ಏನಾದರೂ ಒಂದು ಸ್ಪಷ್ಟವಾದ ನೀತಿ ಮಾಡಿದ್ದೀರೋ ಹೇಗೆ ಎನ್ನುವುದನ್ನು ಸ್ಪಷ್ಟ ಮಾಡಬೇಕಾಗಿದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಮಾನ್ಯ ಅಧ್ಯಕ್ಷರೆ, ಪ್ರಶ್ನೆಯ ಹಿಂದುಗಡೆ ಇರುವ ಪ್ರಿನ್ಸಿಪಲ್ ಏನು ಅಂದರೆ ಕೇಂದ್ರ ಸರ್ಕಾರದಲ್ಲೂ ಒಂದು ಬಿಲ್ ಎನಾಕ್ಟ್ ಆಗಿ ಮಂತ್ರಿಗಳ ಸಂಖ್ಯೆ ಕಡಿಮೆ ಆಯಿತು. ತಾವು ಅದನ್ನೂ ಬಜೆಟ್ ಭಾಷಣದಲ್ಲಿ ಹೇಳಿದ್ದೀರಿ. ಇಲ್ಲಿ ಎಷ್ಟು ಐಎಎಸ್ ಹುದ್ದೆಗಳನ್ನು ತಾವು ಕಡಿಮೆ ಮಾಡುತ್ತಿದ್ದೀರಿ? ಎಷ್ಟು ಐಪಿಎಸ್ ಹುದ್ದೆಗಳನ್ನು ತಾವು ಕಡಿಮೆ ಮಾಡುತ್ತಿದ್ದೀರಿ? ಎಷ್ಟು ಡಿಪಾರ್ಟ್‌ಮೆಂಟನ್ನು ರೀಆರ್ಗನೈಸ್ ಮಾಡಿ ಸೆಕ್ರೆಟರಿಯೇಟ್‌ಗಳನ್ನು ಕಡಿಮೆ ಮಾಡುತ್ತೀರಿ ಎಂದು ನಾನು ಕೇಳಲು ಬಯಸುತ್ತೇನೆ ಸಾರ್. ಯಾರನ್ನೋ ಅಲ್ಲಿ ತಾಲ್ಲೂಕು ಲೆವೆಲ್‌ನಲ್ಲಿ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಇಲಾಖೆ ಇದ್ದುದ್ದನ್ನು ಮುಚ್ಚಿ ಬಿಟ್ಟು ಅದನ್ನೇ ತಾವು ಮುಚ್ಚಿರುವುದು. ಡಿವಿಜನಲ್ ಕಮೀಷನರ್ ಆಫೀಸ್ ಮುಚ್ಚಿದಿರಿ, ಡಿಸಿ ಆಫೀಸಿಗೆ ಬಂದಿರಿ. ಮೇಲ್ವರ್ಗದ ಹುದ್ದೆಗಳಾದ ಐಎಎಸ್, ಐಪಿಎಸ್ ಹುದ್ದೆಗಳು ಈ ರಾಜ್ಯಕ್ಕೆ ಅನಗತ್ಯವಾಗಿ ಬೇಕಾಗಿದೆ, 75 ಸಬ್ ಡಿವಿಜನ್ ಇಟ್ಟು ಕೊಂಡಿರುವ ಕಡೆಗೆ 400 ಜನ ಅಸಿಸ್ಟೆಮಟ್ ಕಮೀಷನರ್ ಇದ್ದಾರೆಂದು ತಾವು ಇಲ್ಲಿ ಮಾತನಾಡಿದ್ದೇವೆ. ಆ ಹುದ್ದೆಗಳನ್ನು ಎಷ್ಟು ಮುಚ್ಚಿದ್ದೀರಿ? ಈ ರಾಜ್ಯದಲ್ಲಿ 400 ಜನ ಅಸಿಸ್ಟೆಂಟ್ ಕಮೀಷನರ್‌ಗೆ ಕೆಲಸ ಇದೆಯಾ? ಈ ರಾಜ್ಯದಲ್ಲಿ ಇಷ್ಟೊಂದು ಐಎಎಸ್ ಅಧಿಕಾರಿಗಳಿಗೆ ಕೆಲಸ ಇದೆಯಾ? ಎರಡೆರಡು ಮೂರು ಮೂರು, ನಾಲ್ಕು ನಾಲ್ಕು ಸೆಕ್ರೆಟರಿಗಳನು ಮಾಡಿ ಒಬ್ಬೊಬ್ಬ ಮಂತ್ರಿಯ ಕೆಳಗೆ ತರುತ್ತಿದ್ದೀರಲ್ಲಾ, ಅದನ್ನು ಏನಾದರು ಶಿಫಾರಸ್ ಮಾಡಿದ್ದೀರಾ? ಅದನ್ನು ಮುಚ್ಚುತ್ತೀರಾ ಎಂಬುದು ಸ್ಪಷ್ಟವಾಗಿ ಹೇಳಬೇಕು.

**ಶ್ರೀ ಕೆ. ಶ್ರೀನಿವಾಸ ಗೌಡ** : ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರೆ ಅವರು ಹೇಳಿದ ಹಾಗೆ ಈಗಾಗಲೇ ಪ್ರೈಮರಿ ಹಾಗೂ ಮಿಡಲ್ ಸ್ಕೂಲಿನಲ್ಲಿ ಕೌನ್ಸಿಲಿಂಗ್ ಇದೆ. ಉಳಿದ ಎಲ್ಲಾ ಹುದ್ದೆಗಳಿಗೂ ಕೂಡ ನಿಮಗೂ ಗೊತ್ತು, ನಮಗೂ ಗೊತ್ತು ಯಾವ ತರಹ ನಡೆಯುತ್ತಿದೆ ಎಂದು. ಇದು ನಾವು ಮಾತನಾಡುವುದಕ್ಕೆ ಬಹಳ ರುಚಿಯಾಗಿ, ಬಹಳ ಸಂತೋಷವಾಗಿ ಕಿವಿಗೆ ಕೇಳಿಸುತ್ತದೆ ವಿನಹ ಕಾರ್ಯರೂಪಕ್ಕೆ ನಾವು ತರಲಿಕ್ಕೆ ಹಲವಾರು ತೊಡುಕುಗಳು ಕೂಡ ಇದ್ದಾವೆ. ಅದರೂ ಕೂಡ ಹಾರ್ನಳ್ಳಿ ರಾಮಸ್ವಾಮಿಯವರು ಹಾಕಿಕೊಟ್ಟ ಗೈಡೆಲೈನ್ಸ್ ಮೇಲೆ ನಾವು ಹೋಗಬೇಕು ಎಂದು ಸರ್ಕಾರ ತೀರ್ಮಾನಿಸಿದೆ. ಇದು ಒಂದು ಹೇಳುತ್ತಾ ಎರಡನೆಯದು ಮಾನ್ಯ ಮಾಧುಸ್ವಾಮಿ ಅವರು ಹೇಳಿದ ಪ್ರಕಾರ ಅದನ್ನು ನಾನು ಒಪ್ಪುತ್ತೇನೆ. ನೀವು ಹೇಳಿದ ಮೇಲು ಹುದ್ದೆಗಳಲ್ಲಿ ಕಾಮರ್ಸ್ ಡಿಪಾರ್ಟ್‌ಮೆಂಟ್‌ನದು ಬಿಟ್ಟರೆ ಉಳಿದ ಯಾವ ಡಿಮಾರ್ಟಮೆಂಟನ್ನೂ ಮುಚ್ಚಿಲ್ಲ. ಹಾರ್ನಳ್ಳಿ ರಾಮಸ್ವಾಮಿಯವರು ಎಲ್ಲಾ ಇಲಾಖೆಗಳನ್ನು ಮುಚ್ಚು ಎಂದು ಹೇಳಿಲ್ಲ. ಆದರೆ ಕಡಿಮೆ ಮಾಡುವುದಕ್ಕೆ ಏನೇನು ಕ್ರಮಗಳನ್ನು ಜರುಗಿಸಬೇಕೆನ್ನುವುದನ್ನು ಹೇಳಿದ್ದಾರೆ. ಹಿಂದಿನ ಸರ್ಕಾರದವರು ರೀಸ್ಟ್ರಕ್ಚರಿಂಗ್

ಮಾಡಿ ಎಂದು ಹೇಳಿದ್ದಾರೆ. ಅದರ ಹಿನ್ನೆಲೆಯಲ್ಲಿ ನಾವು ಚಿಂತನೆ ಮಾಡುತ್ತಿದ್ದೇವೆ. ಅದನ್ನು ಪರಿಶೀಲನೆ ಸರ್ಕಾರ ಮಾಡುತ್ತದೆ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**ಶ್ರೀ ಜಿ.ಎ. ಶ್ರೀರಾಮರೆಡ್ಡಿ** : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಮುಖ್ಯವಾದಂತಹ ಪ್ರಶ್ನೆಗೆ ಉತ್ತರ ಕೊಡಲಿಲ್ಲ. ಏನು ಅಂದರೆ ರಾಮಸ್ವಾಮಿ ವರದಿಯ ಹಿಂದೆ ಇರತಕ್ಕಂಥ ಉದ್ದೇಶ ಏನು ಅಂದರೆ ಸರ್ಕಾರದ ವೆಚ್ಚವನ್ನು ಕಡಿಮೆ ಮಾಡತಕ್ಕ ದೃಷ್ಟಿಯಲ್ಲಿ ಅನಗತ್ಯ ವೆಚ್ಚಗಳು ಬರಹ ಹಾಗೆ ಕೆಲವು ಇಲಾಖೆಗಳನ್ನು ಮುಚ್ಚಬೇಕು ಎಂದು ಹೇಳಿರತಕ್ಕ ಉದ್ದೇಶ. ನೀವು ಯಾವ ಇಲಾಖೆಯನ್ನು ಮುಚ್ಚಿ ಎಷ್ಟು ಹಣವನ್ನು ಸರ್ಕಾರಕ್ಕೆ ಇದುವರೆಗೂ ಉಳಿದ್ದೀರಿ? ನೀವು ಮಾನ್ಯ ಜಗದೀಶ್ ಶೆಟ್ಟರ್ ಅವರ ಪ್ರಶ್ನೆಗೆ ಉತ್ತರ ಕೊಡತಕ್ಕ ಸಂದರ್ಭದಲ್ಲಿ ಒಂದು ವಿಚಾರ ಹೇಳಿದಿರಿ. ಇದು ಮುಚ್ಚಬೇಕಾದರೆ ಸಮಸ್ಯೆಗಳು ಇವೆ, ನಿಮಗೂ ಗೊತ್ತು, ನಮಗೂ ಗೊತ್ತು ಎಂದು ಹೇಳಿದಿರಿ. ಹಾಗಾದರೆ ಅದು ಎಲ್ಲರಿಗೂ ಗೊತ್ತು. ರಾಮಸ್ವಾಮಿಯವರ ವರದಿಯನ್ನು ಜಾರಿಗೆ ಮಾಡಲಿಕ್ಕೆ ಆಗುವುದಿಲ್ಲ ಎನ್ನುವುದೂ ಗೊತ್ತು ಅಂತ ಅದರ ಅರ್ಥ. ಅದನ್ನು ಹೇಳಬೇಕಲ್ಲಾ. ರಾಮಸ್ವಾಮಿ ವರದಿಯನ್ನು ಜಾರಿಗೆ ಮಾಡುವುದಕ್ಕೆ ಆಗುವುದಿಲ್ಲ, ಅದು ಇನಪ್ರಾಕ್ಟಿಕಲ್ ಆಗಿದೆ. ಹಲವಾರು ಒತ್ತಡಗಳು ಇವೆ. ಹಾಗಾಗಿ ಎಂದು ಹೇಳಬೇಕಲ್ಲಾ. ಆದರೆ ಪ್ರಶ್ನೆ ಇಲ್ಲಿರತಕ್ಕದ್ದು ಏನು ಎಂದರೆ ರಾಮಸ್ವಾಮಿಯವರ ವರದಿ ಆಧಾರದ ಮೇಲೆ ಯಾವ ಉದ್ದೇಶ ಕ್ಕೋಸ್ಕರ ಅದನ್ನು ರಚನೆ ಮಾಡಿದರು? ಯಾವ ಉದ್ದೇಶಕ್ಕೋಸ್ಕರ ಅವರು ಹೇಳಿದರೋ ಆ ಉದ್ದೇಶ ಸಫಲ ಆಗಲಿಲ್ಲ. ಸಫಲ ಮಾಡಲಿಕ್ಕೆ ಸಾಧ್ಯವಾಗಲಿಲ್ಲ, ಆಗುವುದೂ ಇಲ್ಲ, ಅದನ್ನು ಸ್ಪಷ್ಟವಾಗಿ ಹೇಳಬೇಕು.

**(ಗೊಂದಲ)**

**ಶ್ರೀ ಕೆ. ಶ್ರೀನಿವಾಸ ಗೌಡ** : ನಾನು ಉತ್ತರ ಹೇಳಿದ ಮೇಲೆ ಆಮೇಲೆ ಕೇಳಿ ಹೇಳುತ್ತೇನೆ.

**ಅಧ್ಯಕ್ಷರು** : ಈಗ ದಯಮಾಡಿ. ಮೂರು ಉಪ ಪ್ರಶ್ನೆಗಳಿಗೆ ಅವಕಾಶ ಕೊಡಬಹುದು. ನಾನು ಕೊಟ್ಟಿದ್ದೇನೆ. ಎಲ್ಲರೂ ಉಪ ಪ್ರಶ್ನೆಗಳನ್ನು ಕೇಳುತ್ತಿದ್ದರೆ ಒಂದೊಂದು ಪ್ರಶ್ನೆಗೆ ಗಂಟೆ ಗಟ್ಟಲೆ ಆದರೆ ಹೇಗೆ?

**ಶ್ರೀ ಕೆ. ಶ್ರೀನಿವಾಸ ಗೌಡ** : ಈಗ ಡಿಸ್ಕಷನ್ ಆಯಿತು, ಆದರೂ ಕೂಡ ಹೇಳುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಸಾಕಷ್ಟು ಅವಕಾಶಗಳನ್ನು ತಾವು ಮಾಡಿಕೊಡುತ್ತಿದ್ದೀರಿ. ಅದು ಯಾವುದೇ ಪೂರ್ಟಿಯವರು ಇರಲಿ.

**ಅಧ್ಯಕ್ಷರು** : ಮಾನ್ಯ ಯಡಿಯೂರಪ್ಪನವರೆ, ಈಗ ಏನಾಗಿದೆ ಎಂದರೆ ಎಲ್ಲರೂ ಒಂದು ನಿಮಿಷ ಅಂದರೆ ಒಂದು ಗಂಟೆ ಆಗುತ್ತದೆ, ಅದು ಸಾಧ್ಯವಾಗುವುದಿಲ್ಲ, ದಯಮಾಡಿ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಸಾರ್ ಒಂದು ನಿಮಿಷ ಈಲ್ಡ್ ಆಗಿ. ನಾನೇನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ಯಾರೇ ಅಲ್ಲಿ ಹೋಗಿ ಕುಳಿತುಕೊಂಡರೂ ನಿಮ್ಮನ್ನೇ ಮತ್ತೆ ಸ್ಪೀಕರ್ ಆಗಿ ಮುಂದುವರಿಯುವಂತೆ ಮಾಡುತ್ತೇವೆ ಸಾರ್. ಅಷ್ಟು ಒಳ್ಳೆಯ ರೀತಿಯ ಸಹಕಾರಕೊಡುತ್ತೀರಿ. ಅಷ್ಟು ಜ್ವಲಂತ ಸಮಸ್ಯೆಗಳಿಗೆ ಅವಕಾಶ ಕೊಡುತ್ತಿದ್ದೀರಿ, ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಮಾನ್ಯ ವಾಟಾಳ್ ನಾಗರಾಜ್ ಅವರು ಕೇಳಿಸಿಕೊಂಡರೋ ಇಲ್ಲವೋ ಗೊತ್ತಿಲ್ಲ.

**ಅಧ್ಯಕ್ಷರು** : ನೀವು ಮಾಡುವುದು, ಅವರು ಮಾಡುವುದು ಪ್ರಶ್ರೆ ಅಲ್ಲ. ಈಗ ನಿಯಮಾವಳಿಗಳ ಪ್ರಕಾರ ಸಭೆ ನಡೆಸಿಕೊಂಡು ಹೋಗುವುದು ಮುಖ್ಯ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಯಾವುದೇ ಸರ್ಕಾರ ಬರಲಿ. ಅಲ್ಲಿ ಯಾರೇ ಕುಳಿತಿದ್ದಿರೂ ನಿಮ್ಮನ್ನೇ ಸ್ಪೀಕರ್ ಆಗುವಂತೆ ನೋಡಿಕೊಳ್ಳುತ್ತೇವೆ; ರಾಜ್ಯದ ಜನರ ಜ್ವಲಂತ ಸಮಸ್ಯೆಗಳನ್ನು ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ಮಾನ್ಯ ವಾಟಾಳ್‌ನಾಗರಾಜ್‌ರವರೆ, ನಿಮ್ಮದೇನಾದರೂ ಅಭ್ಯಂತರ ಇದೆಯಾ?

**ಶ್ರೀ ವಾಟಾಳ್ ನಾಗರಾಜ್** : ಅದನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಇವತ್ತಿಂದ ಇವರು ಇಲ್ಲೇ ಇರಲಿ, ಅವರು ಇಲ್ಲೇ ಕುಳಿತುಕೊಳ್ಳಲಿ.

**ಅಧ್ಯಕ್ಷರು** : ನೀವು ಪ್ರಪೋಸ್ ಮಾಡಿ ಅವರು ಸೆಕೆಂಡ್ ಮಾಡಿದಿರಿ.

**ಶ್ರೀ ಅರಗ ಜ್ಞಾನೇಂದ್ರ** : ಒಟ್ಟಿನಲ್ಲಿ ನೀವು ಮಂತ್ರಿಯಾಗಬಾರದು ಎಂದು ಹೇಳುತ್ತಿದಾರೆ.

**ಅಧ್ಯಕ್ಷರು** : ಆದರೆ ಎಲ್ಲಕ್ಕಿಂತ ಹೆಚ್ಚಾಗಿ ಈ ಸಭೆ ಮಾಡಿರತಕ್ಕ ನಿಯಮಾವಳಿಗಳು ಇದ್ದಾವಲ್ಲಾ. ಆ ನಿಯಮಾವಳಿಗಳನ್ನೂ ಪಾಲಿಸಬೇಕಲ್ಲಾ.

**ಶ್ರೀ ಕೆ. ಶ್ರೀನಿವಾಸ ಗೌಡ** : ಮಾನ್ಯ ಅಧ್ಯಕ್ಷರೆ, ಯಾವುದೇ ರಿಪೋರ್ಟ್ ಇರಲಿ, ರಾಮಸ್ವಾಮಿಯವರು ಕೊಟ್ಟಂತಹ ರಿಪೋರ್ಟ್ ಒಂದೇ ದಿನದಲ್ಲಿ ಎಲ್ಲವನ್ನೂ ಜಾರಿಗೆ ತರುವುದಕ್ಕೆ ಆಗುವುದಿಲ್ಲ. ಹಂತ ಹಂತವಾಗಿ ತರಬೇಕಾಗುತ್ತದೆ. ಈಗಾಗಲೇ ಡಿವಿಜನಲ್ ಕಮೀಷನರ್ ಆಫೀಸ್‌ಗಳನ್ನು ಮುಚ್ಚಿದ್ದೇವೆ. ಕಾಮರ್ಸ್ ಡಿಪಾರ್ಟ್‌ಮೆಂಟ್ ಒಂದು ಡಿಪಾರ್ಟ್‌ಮೆಂಟ್ ಮುಚ್ಚಿದ್ದೇವೆ. ಇದು ರೀಸ್ಟ್ರಕ್ಚರಿಂಗ್. ಉಳಿದದ್ದು ನೀವು ಹೇಳಿದ ಪ್ರಕಾರ 400 ಎಸಿಗಳು ಇದ್ದಾರೆ. ಇವನ್ನೆಲ್ಲಾ ರೀಸ್ಟ್ರಕ್ಚರಿಂಗ್‌ನಲ್ಲಿ ತರುತ್ತೇವೆ. ಅದನ್ನು ಒಂದೇ ದಿವಸ ನೀವು ಮಾಡಲಿಲ್ಲ. ಅಥವಾ ಇವತ್ತಿನಿಂದ ಎಷ್ಟು ದಿನದಲ್ಲಿ ಮಾಡುತ್ತೀರಿ ಎಂದು ಹೇಳಿದರೆ ಹೇಗೆ? ಯಾವುದೇ ಒಂದು ರಿಪೋರ್ಟಿನ ಆಧಾರದ ಮೇಲೆ ಸರ್ಕಾರ ಹಂತ ಹಂತವಾಗಿ ಹೋಗಬೇಕಾಗುತ್ತದೆ. ಇವತ್ತು ಅನೇಕ ವಿಷಯಗಳು ನಿಮಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಇವತ್ತು ಸೆಕ್ರೆಟರಿಯಿಂದ ಡೆಪ್ಯುಟಿ ಸೆಕ್ರೆಟರಿಗೆ ಫೈಲ್ ಹೋಗಬೇಕಾದರೆ ಸೆಕೆಂಡ್ ಡಿವಿಜನ್ ಕ್ಲರ್ಕ್‌ನಿಂದ ಹೋಗಬೇಕಾಗಿತ್ತು. ಈಗ ಸೆಕ್ಷನ್ ಆಫೀಸರ್ ನೇರವಾಗಿ ಡಿ.ಎಸ್. ವರೆಗೂ ಕಳಿಸಬಹುದು. ಆಮೇಲೆ ಅಂಡರ್ ಸೆಕ್ರೆಟರಿ ನೇರವಾಗಿ ಸೆಕ್ರೆಟರಿಗೆ ಕಳಿಸಬಹುದು. ಇವೆಲ್ಲಾ ಆಗಿವೆ. ಇವನ್ನು ಇನ್ನೂ ಮಾಡುವಂತಹದು ಇದೆ. ಜಂಪಿಂಗ್ ಲೆವೆಲ್ ಅನ್ನು ಕಡಿಮೆ ಮಾಡುವಂತಹದ್ದನ್ನು ಈಗಾಗಲೇ ಹಾರ್ನಳ್ಳಿ ರಾಮಸ್ವಾಮಿಯವರ ರಿಪೋರ್ಟ್ ಆಧಾರದ ಮೇಲೆ ತಂದಿದ್ದೇವೆ. ಉಳಿದಂತಹ ಹುದ್ದೇಗಳನ್ನು ಕಡಿಮೆ ಮಾಡುವಂತಹದು; ಈಗಾಗಲೇ ನಿಮ್ಮ ಕಣ್ಣಿಗೆ ಕಾಣಿಸುವ ಹಾಗೆ ಡಿವಿಜನಲ್ ಕಮೀಷನರ್ ಆಫೀಸ್ ಕ್ಲೋಸ್ ಮಾಡಿದ್ದೇವೆ. ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಡಿಪಾರ್ಟ್‌ಮಂಟಿನಲ್ಲಿ ಒಂದು ಡಿಪಾರ್ಟ್‌ಮೆಂಟ್ ಕ್ಲೋಸ್ ಮಾಡಿದ್ದೇವೆ. ಇದು ಆಗುತ್ತದೆ. ಆದರೆ ನೀವು ಒಂದೇ ದಿವಸ ಆಗಿ ಬಿಡಬೇಕು, ಇವತ್ತೇ ಜಾರಿಗೆ ತರಬೇಕು ಎನ್ನುವುದು ಅದು ಕಷ್ಟದ ಕೆಲಸ ಆಗುತ್ತದೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ನಾಲ್ಕು ವರ್ಷ ಆಗಿದೆ ವರದಿ ಕೊಟ್ಟು.

**ಶ್ರೀ ಕೆ. ಶ್ರೀನಿವಾಸ ಗೌಡ** : ಸರ್ಕಾರ ಇದರ ಮೇಲೆ ಬಹಳಷ್ಟು ಚಿಂತನೆ ಮಾಡುತ್ತದೆ. ಇದನ್ನು ಮಾಡುತ್ತೇವೆ ಎಂದು ನಾನು ಈ ಮನೆಗೆ ಹೇಳಲು ಇಚ್ಛೆಪಡುತ್ತೇನೆ.

**ಅಧ್ಯಕ್ಷರು** : ಮಾನ್ಯ ವಾಟಾಳ್ ಅವರೇ, ವಿವರವಾಗಿ ಹೇಳಿ ಬಿಟ್ಟಿದ್ದಾರಲ್ಲಾ

**ಶ್ರೀ ವಾಟಾಳ್ ನಾಗರಾಜ್** : ಅಧ್ಯಕ್ಷರೆ, ಆಡಳಿತ ಸುಧಾರಣೆ ವಿಚಾರ. ಆಡಳಿತ ಸುಧಾರಣೆ ಒಂದೇ ದಿವಸದಲ್ಲಿ ಆಗುವುದಿಲ್ಲ ನೀವು ಹೀಗೆ ಹೇಳಿ ಬಿಟ್ಟರೆ ಎಂದಿರಲ್ಲಾ. ಯಾವ

ಉದ್ದೇಶಕ್ಕೋಸ್ಕರವಾಗಿ ನೀವು ತರಾತುರಿಯಿಂದ ಹಾರ್ನಳ್ಳಿ ರಾಮಸ್ವಾಮಿಯವರನ್ನು ನೇಮಿಸಿ ಆಡಳಿತ ಸುಧಾರಣೆಗೆ ಒಂದು ವರದಿಯನ್ನು ಕೊಡಿ ಎಂದು ತಾವು ಕೇಳಿದಿರಿ. ವರದಿಯನ್ನು ಕೊಟ್ಟು ಈಗಾಗಲೇ ಮೂರು ವರ್ಷ ಆಗಿದೆ. ಇದರ ಹಿಂದೆ ಎರಡು ವರದಿಗಳು ಬಂದಿದೆ, ತಮಗೆ ಜ್ಞಾಪಕ ಇದೆಯೋ ಇಲ್ಲವೋ ಗೊತ್ತಿಲ್ಲ. ಒಂದು ಕೇಂದ್ರದ ವರದಿ. ಆಡಳಿತ ಸುಧಾರಣೆ ವಿಚಾರದಲ್ಲಿ. ಮೊರಾರ್ಜಿ ದೇಸಾಯಿಯವರು ಒಂದು ವರದಿ ಕೊಟ್ಟರು ಮತ್ತು ಕೆಂಗಲ್ ಹನುಮಂತಯ್ಯನವರು ಒಂದು ವರದಿ ಕೊಟ್ಟರು. ಎರಡು ವರದಿ. ಅದು ರಾಜ್ಯ ಮತ್ತು ರಾಷ್ಟ್ರ ಎರಡಕ್ಕೂ ಅನ್ವಯಿಸುವಂತಹದು. ನಮ್ಮ ರಾಜ್ಯದಲ್ಲಿ ಹಾರ್ನಳ್ಳಿ ರಾಮಸ್ವಾಮಿಯವರು ವರದಿಯನ್ನು ಕೊಟ್ಟು ಮೂರುವರೆ ನಾಲ್ಕು ವರ್ಷ ಆಗಿದೆ. ನಾಲ್ಕು ವರ್ಷದಿಂದಲೂ ನೀವು ಏನೂ ಮಾಡದೇ ಈಗ ಮಾಡಿ ಎಂದರೆ ಎಲ್ಲಿ ಮಾಡಲಿ? ಈಗ ತಕ್ಷಣ ಮಾಡಿ ಎಂದರೆ ಎಲ್ಲಿ ಮಾಡಲಿ ಎಂದು ಹೇಳುತ್ತೀರಿ.

**ಅಧ್ಯಕ್ಷರು** : ನೇರವಾಗಿ ಕೇಳಿ ಸ್ವಾಮಿ. ನೇರವಾಗಿ ಏನು ಕೇಳಬೇಕೋ ಅದನ್ನು ಕೇಳಿ.

**ಶ್ರೀ ವಾಟಾಳ್ ನಾಗರಾಜ್** : ಒಂದು ಕಾಲದಲ್ಲಿ ಒಬ್ಬರೇ ಚೀಫ್ ಇಂಜಿನಿಯರ್ ಇದ್ದರು. ಮಾಣಿಕ್ಯಂ ಎಂದು ಹೇಳಿ, ಸುಮಾರು 25 ವರ್ಷದಿಂದ ಒಬ್ಬರೇ ಒಬ್ಬರು ಮುಖ್ಯ ಇಂಜಿನಿಯರ್ ಇದ್ದರು. ಇವತ್ತು ಸ್ವಲ್ಪ ಹೆಚ್ಚು ಕಡಿಮೆ 40 ರಿಂದ 50 ಮುಖ್ಯ ಇಂಜಿನಿಯರ್‌ಗಳು ಇದ್ದಾರೆ. ಪೊಲೀಸ್ ಇಲಾಖೆಯಲ್ಲಿ, ಹಾಗೂ ಎಲ್ಲಾ ಇಲಾಖೆಯಲ್ಲಿ 50 ಜನ, 60 ಜನ ಈ ತರಹ ತುಂಬಿದ್ದಾರೆ. ಇದೆಲ್ಲವನ್ನೂ ನೀವು ಕಡಿತಗೊಳಿಸಬೇಕು. ಇದನ್ನು ಜಾರಿಗೆ ಕೊಡಲು ಬಹಳ ಪ್ರಾಮಾಣಿಕವಾಗಿ ಕ್ರಮ ಕೈಗೊಳ್ಳಬೇಕು. ವರದಿಯಿಂದ ಸರ್ಕಾರಕ್ಕೆ ಅನುಕೂಲವಾಗಬೇಕು ಮತ್ತು ಜನರಿಗೆ ಸುಭದ್ರ ಆಡಳಿತ ಬೇಕು. ವರದಿ ಜಾರಿಗೊಳಿಸುವುದಕ್ಕಾಗದಿದ್ದರೆ ನಿಮಗೆ ಪ್ರಾಮಾಣಿಕತೆ ಇಲ್ಲವೆಂದಾಗುತ್ತದೆ. ಇಲ್ಲದಿದ್ದರೆ, ವರದಿ ತಿರಸ್ಕರಿಸಿದ್ದೇವೆಂದಾದರೂ ಹೇಳಬೇಕು.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ನನ್ನ ಪ್ರಶ್ನೆಗೆ ಉತ್ತರಿಸಲಿಲ್ಲ. ವರದಿ ಜಾರಿಗೊಳಿಸಿದ್ದರಿಂದ ಎಷ್ಟು ಹಣ ಉಳಿತಾಯವಾಗಿದೆ ಎಂದು ಪ್ರಶ್ನೆ ಕೇಳಿದ್ದಕ್ಕೆ ಉತ್ತರ ಬರಲಿಲ್ಲ. ಎರಡನೆಯದಾಗಿ, ವರದಿಯಲ್ಲಿ ಕೇವಲ ಮೇಲ್ದರ್ಜೆಯ ಹುದ್ದೆಗಳನ್ನಷ್ಟೇ ರದ್ದುಗೊಳಿಸಬೇಕಂದು ತಿಳಿಸಿಲ್ಲ. ಕೆಳಹಂತದ ಅಧಿಕಾರಿಗಳನ್ನು, ಕೆಳ ವರ್ಗದ 'ಸಿ' ಮತ್ತು 'ಡಿ' ಗುಂಪಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ತೆಗೆದು ಹಾಕುವುದನ್ನು ಒಪ್ಪುವುದಕ್ಕಾಗುವುದಿಲ್ಲ, ಹಾರ್ನಳ್ಳಿ ರಾಮಸ್ವಾಮಿಯವರ ವರದಿಯಲ್ಲಿರುವುದೇನೆಂದರೆ, ಸರ್ಕಾರಕ್ಕೆ ಅತಿಯಾಗಿ ಹೊರೆಯಾಗಿರುವ ಮೇಲ್ದರ್ಜೆಯ ಹುದ್ದೆಗಳನ್ನಷ್ಟೇ ರದ್ದುಗೊಳಿಸಬೇಕು. ಇದು ಬಿಟ್ಟು peons, clerks, SDCs, FDCs ಇವರನ್ನೆಲ್ಲಾ ರದ್ದುಗೊಳಿಸಬೇಕೆಂದು ತಿಳಿಸಿಲ್ಲ. ಈ ಹುದ್ದೆಗಳನ್ನು ಕಡಿತಗೊಳಿಸುವ ಮೂಲಕ ಇವರ ಕುತ್ತಿಗೆ ಕುಯ್ಯುವ ಕೆಲಸ ಮಾಡಬೇಡಿ. ಎಷ್ಟು ಉನ್ನತ ಹುದ್ದೆಗಳನ್ನು ರದ್ದುಗೊಳಿಸಿದ್ದೀರಿ? ಇದರಿಂದ ಸರ್ಕಾರಕ್ಕೆ ಎಷ್ಟು ಹಣ ಉಳಿತಾಯವಾಗಿದೆ ಎಂಬುದೇ ನನ್ನ ಮುಖ್ಯ ಪ್ರಶ್ನೆಯಾಗಿದೆ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಈಗ ಎಲ್ಲಾ ಮಾನ್ಯ ಸದಸ್ಯರುಗಳು ಏಕೆ ಈ ವಿಚಾರದಲ್ಲಿ ಹೆಚ್ಚು ಮಾತನಾಡುತ್ತಿದ್ದಾರೆಂದರೆ, ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ಒಬ್ಬ ರಾಜಕೀಯ ಮುತ್ಸದ್ದಿಯಾಗಿದ್ದು, ಅವರಿಗೆ ಆಡಳಿತದಲ್ಲಿ ಸುಧಾರಣೆ ತರುವ ಸಲುವಾಗಿ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಅವರಿಗೆ ಜವಾಬ್ದಾರಿ ವಹಿಸಲಾಗಿತ್ತು. ಮಾನ್ಯ ಅಧ್ಯಕ್ಷರೆ, ನೀವು ಆಶ್ಚರ್ಯ ಪಡುತ್ತೀರಿ: ಅವರು ಹಲವಾರು ಗಣ್ಯರಿಗೆ ಪತ್ರ ಬರೆದು, ದೂರವಾಣಿ ಮೂಲಕ ಸಂಪರ್ಕಿಸಿ,

ಅಗತ್ಯವಿರುವ ಅಂಕಿ-ಅಂಶ, ಸಲಹೆ-ಸೂಚನೆಗಳನ್ನೆಲ್ಲಾ ಪಡೆದು, ಕೂಲಂಕಷವಾಗಿ ಅಧ್ಯಯನ ನಡೆಸಿ, ಸರ್ಕಾರಕ್ಕೆ ಸಮಗ್ರವಾದ ಒಂದು ವರದಿ ಸಲ್ಲಿಸಿದ್ದಾರೆ. ವರ್ಗಾವಣೆ ಬಗ್ಗೆಯೂ ಒಂದು ನೀತಿ ಅನುಸರಿಸಬೇಕೆಂದು ವರದಿಯಲ್ಲಿ ಹೇಳಿದ್ದಾರೆ. ಎಲ್ಲೆಲ್ಲಿ ಅನಗತ್ಯವಾದ ಹುದ್ದೆಗಳಿವೆಯೋ, ಈಗ ಹತ್ತು ಮಂದಿ ನೌಕರರು ಕಾರ್ಯ ನಿರ್ವಹಿಸುವ ಕಡೆಗಳಲ್ಲಿ ಹದಿನೈದು ಮಂದಿ ನೌಕರರುಗಳಿದ್ದರೆ, ಆ ಹುದ್ದೆಗಳನ್ನು ಕಡಿಮೆಗೊಳಿಸುವುದು ಹೇಗೆಂದು ತಿಳಿಸಿದ್ದಾರೆ. ಇವೊತ್ತು ನಾನ್-ಪ್ಲಾನ್ ಎಕ್ಸ್‌ಪೆಂಡಿಚರ್ ಜಾಸ್ತಿಯಾಗುತ್ತಿದ್ದು, ಪ್ಲಾನ್ ಎಕ್ಸ್‌ಪೆಂಡಿಚರ್ ಕಡೆ ನಾವು ಗಮನಕೊಡುವುದಕ್ಕಾಗುತ್ತಿಲ್ಲ. ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ಶೇಕಡ 25ಕ್ಕಿಂತಲೂ ಕಡಿಮೆ ಹಣವನ್ನು ನಾವು ಖರ್ಚು ಮಾಡಿ, ನಾನ್-ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ಶೇಕಡ 75ರಷ್ಟು ಹಣ ಖರ್ಚು ಮಾಡುತ್ತಿರುವ ಕಾಲದಲ್ಲಿ ತಾವೇ ರಚಿಸಿದಂಥ ಹಾರ್ನಳ್ಳಿ ರಾಮಸ್ವಾಮಿ ಆಯೋಗದ ವರದಿಯನ್ನು ಈ ಸದನದ ಮಾನ್ಯ ಸದಸ್ಯರೆಲ್ಲರೂ ಸರ್ವಾನುಮತದಿಂದ ಒಪ್ಪಿಕೊಳ್ಳಲು ಸಿದ್ದವಿರುವಾಗ ನಿರ್ದಾಕ್ಷಿಣ್ಯವಾಗಿ, ನಿರ್ಭೀತಿಯಿಂದ ವರದಿಯನ್ನು ಕಾರ್ಯರೂಪಕ್ಕೆ ತರಲು ಕಷ್ಟವೇನಿದೆ? ಏಕೆ ವರದಿಯನ್ನು ಕಾರ್ಯರೂಪಕ್ಕೆ ತರುತ್ತಿಲ್ಲ? ವರದಿಗಳನ್ನು ತರಿಸಿಕೊಳ್ಳುವಂತಾದ್ದು, ಈ ರೀತಿ ಆಯೋಗ ರಚಿಸಿ ನೇಮಿಸುವಂತಾದ್ದು, ಇದೊಂದು ಪರಿಪಾಠವಾಗಿದೆಯೇ ಹೊರತು ಸರ್ಕಾರಕ್ಕೆ ಸಲ್ಲಿಸಿದ ವರದಿಯನ್ನು ಅಭ್ಯಾಸ ಮಾಡಿ ಪ್ರಾಮಾಣಿಕವಾಗಿ ತಕ್ಷನವೇ ರಾಜ್ಯದ ಜನರ ಹಿತದೃಷ್ಟಿಯಿಂದ ಸರ್ಕಾರ ಅನುಷ್ಠಾನಕ್ಕೆ ತರುವುದಿಲ್ಲವೆಂದರೆ ವರದಿಯನ್ನು ತೆಗೆದುಕೊಂಡು ಏನು ಮಾಡುತ್ತೀರಿ? ನೀವೆಲ್ಲರೂ ಕುಳಿತುಕೊಂಡು ಕೂಲಂಕಷವಾಗಿ ಚರ್ಚಿಸಿ, ವರದಿಯನ್ನು ಸಮಗ್ರವಾಗಿ ಕಾರ್ಯರೂಪಕ್ಕೆ ತರುತ್ತೇವೆಂದು ಹೇಳುವ ಮೂಲಕ ನಿಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ವ್ಯಕ್ತಪಡಿಸಬೇಕು.

**ಶ್ರೀ ಕೆ. ಶ್ರೀನಿವಾಸ ಗೌಡ** : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಹೇಳಿದ ರೀತಿಯಲ್ಲಿ "ಈಗಾಗಲೇ 14 ಇಲಾಖೆಗಳನ್ನು ಹಾಗೂ ಡಿವಿಜನಲ್ ಪೋಸ್ಟ್‌ಗಳನ್ನು ರದ್ದುಗೊಳಿಸಲಾಗಿದೆ. ವಿಭಾಗಾಧಿಕಾರಿಗಳ ಹುದ್ದೆ ಹಾಗೂ ಕಚೇರಿಗಳನ್ನು ರದ್ದುಗೊಳಿಸಲಾಗಿದೆ. ವಿಭಾಗೀಯ ಹಂತದ ಹುದ್ದೆಗಳನ್ನು ಕಚೇರಿಗಳೊಂದಿಗೆ ರದ್ದುಗೊಳಿಸಲಾಗಿದೆ. ಸಚಿವಾಲಯದಲ್ಲಿ ಪೀಠಾಧಿಕಾರಿ ಪದ್ಧತಿ ಮತ್ತು ಏಕ ಕಡತ ಪದ್ಧತಿಯನ್ನು ಜಾರಿಗೆ ತರಲಾಗಿದೆ. ರಾಜ್ಯದಲ್ಲಿ ತರಬೇತಿ ನೀತಿಯನ್ನು ಪ್ರಕಟಿಸಲಾಗಿದೆ. ಕರ್ನಾಟಕ ಮಾಹಿತಿ ಪಡೆಯುವ ಹಕ್ಕು ಅಧಿನಿಯಮ ಮತ್ತು ನಿಯಮಗಳನ್ನು ಪ್ರಕಟಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 2001 ಅನ್ನು ಜಾರಿಗೊಳಿಸಲಾಗಿದೆ. ಸಚಿವಾಲಯದಲ್ಲಿ ಪತ್ರಗಳ ನಿರ್ವಹಣೆ ಹಾಗೂ ಕಡತಗಳ ನಿರ್ವಹಣೆ ಪದ್ಧತಿಯನ್ನು LAN ಮುಖಾಂತರ ಮಾಡಲಾಗಿದೆ. ಇಲಾಖೆಯಲ್ಲಿರುವ ಹೆಚ್ಚುವರಿ ಹುದ್ದೆಗಳನ್ನು ಗುರ್ತಿಸಿ, ಅವುಗಳನ್ನು ಕಡಿತಗೊಳಿಸಲು ವಿಶೇಷ ಸ್ವಯಂ ನಿವೃತ್ತಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಹೆಚ್ಚುವರಿ ಸಿಬ್ಬಂದಿಯನ್ನು ಮರು ನೇಮಕಾತಿ ಮಾಡಲು ಇಲಾಖಾ ಸೇವಾ ನಿಯಮಗಳ ವಿಭಾಗದಲ್ಲಿ 'ಮರು ನೇಮಕಾತಿ ಕೋಶ' ರಚಿಸಲಾಗಿದೆ. ಇವುಗಳಲ್ಲದೆ, ಕೆಲವೊಂದು ಇಲಾಖೆಗಳಿಗೆ ಸಂಬಂಧಿಸಿದ ಶಿಫಾರಸ್ಸನ್ನು ಅನುಷ್ಠಾನಗೊಳಿಸಲಾಗಿದೆ". ತಾವು ಹೇಳಿದ್ದಕ್ಕೆ ನಾನು ಹೇಳಬಯಸುವುದೇನೆಂದರೆ, ಇಲಾಖೆಯನ್ನು re-structure ಮಾಡುವುದಕ್ಕೆ ಎಲ್ಲಾ ಇಲಾಖೆಗಳಿಗೂ ಸೂಚನೆಗಳನ್ನು ನೀಡಿದ್ದು, ಸೂಚನೆ ಮೇಲೆ ಈಗಾಗಲೇ work-out ಮಾಡುತ್ತಿದ್ದಾರೆ. ಈ ಕುರಿತಂತೆ ಆದಷ್ಟು ಬೇಗನೆ ಈ ಸದನಕ್ಕೆ ಉತ್ತರಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾ 'ಹಿಂದೆ ಒಬ್ಬರೇ ಚೀಫ್ ಇಂಜಿನಿಯರ್, ಒಬ್ಬರೇ ಡಿ.ಸಿ. ಇದ್ದರು'

ಎಂದರು. ನಿಜ, ಈ ದೇಶಕ್ಕೆ ಸ್ವಾತಂತ್ರ್ಯ ಬಂದಾಗ 36 ಕೋಟಿ ಜನಸಂಖ್ಯೆ ಇತ್ತು. ಇವೊತ್ತು ಜನಸಂಖ್ಯೆ ಎಷ್ಟಿದೆ? ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಜನಸಂಖ್ಯೆ ಆಧಾರದ ಮೇಲೆ ನಾವು ಆಡಳಿತ ನಡೆಸಬೇಕಾಗುತ್ತದೆ. ಇವೊತ್ತು ದೇಶದಲ್ಲಿ 115 ಕೋಟಿ ಜನಸಂಖ್ಯೆ ಇದೆ. ಒಬ್ಬರೇ ಡಿ.ಸಿ. ಇರಬೇಕು, ಒಬ್ಬರೇ ಎಸ್.ಪಿ. ಇರಬೇಕು, ಒಬ್ಬರೇ ಚೀಫ್ ಇಂಜಿನಿಯರ್, ಒಬ್ಬರೇ ಚೀಫ್ ಸೆಕ್ರೆಟರಿ ಇರಬೇಕೆನ್ನುವ ನಿಮ್ಮ ಭಾವನೆಗಳು ಸರಿಯಿದ್ದರೂ ಇರುವಂತಹ ಜನಸಂಕ್ಯೆ ಸ್ಫೋಟವಾಗುವ ಹಿನ್ನೆಲೆಯಲ್ಲಿ ಇಷ್ಟು ಸಂಖ್ಯೆಯ ಹುದ್ದೆಗಳು ಅಗತ್ಯವಿದೆ.

**ಶ್ರೀ ವಾಟಾಳ್ ನಾಗರಾಜ್** : ಒಬ್ಬರೇ ಇರಬೇಕೆಂದು ನಾನು ಹೇಳಲಿಲ್ಲ.

**ಶ್ರೀ ಕೆ. ಶ್ರೀನಿವಾಸಗೌಡ** : ಅದರ ಹಿನ್ನೆಲೆಯಲ್ಲಿ ಇವೊತ್ತು ಈಗಾಗಲೇ ಅನೇಕ ಹುದ್ದೆಗಳು ಅಗತ್ಯಕ್ಕಿಂತಲೂ ಹೆಚ್ಚಿದೆ, ಇಲ್ಲವೆಂದು ಹೇಳಲಿಲ್ಲ, ಹೆಚ್ಚುವರಿಯಾಗಿರುವ ಹುದ್ದೆಗಳನ್ನು ಹಂತ ಹಂತವಾಗಿ ಕಡಿತಗೊಳಿಸುವುದಕ್ಕೆ ಕ್ರಮ ಜರುಗಿಸುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಅಧ್ಯಕ್ಷರು** : ಹಾರ್ನಳ್ಳಿ ರಾಮಸ್ವಾಮಿ ಆಯೋಗದ ವರದಿ ಏನಿದೆ, ಅದರ ಬಗ್ಗೆ ಸರ್ಕಾರಕ್ಕೆ ಅಷ್ಟೊಂದು ಬದ್ಧತೆ ಇದ್ದಂತೆ ಕಾಣುವುದಿಲ್ಲವೆಂಬುದೇ ಅವರ ತಕರಾರು.

**ಶ್ರೀ ಕೆ. ಶ್ರೀನಿವಾಸ ಗೌಡ** : ಬದ್ಧತೆ ಇಲ್ಲವೆಂದರೆ ಇವೆಲ್ಲವನ್ನೂ ಏಕೆ ತರುತ್ತಿದ್ದೆವು? ಬದ್ಧತೆ ಇದ್ದುದರಿಂದಲೇ ತಂದಿರುವುದು. ಇಲ್ಲದಿದ್ದರೆ, ಇದ್ಯಾವುದನ್ನೂ ಮುಟ್ಟುತ್ತಿರಲಿಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ವರದಿ ಸಲ್ಲಿಸಿ ಎಷ್ಟು ವರ್ಷವಾಯಿತು? ಜನಸಂಖ್ಯೆ ಹೆಚ್ಚಾಗಿದ್ದು, ಭೂಮಿಯೇನೂ ಜಾಸ್ತಿಯಾಗಿಲ್ಲ, ಕಾಮಗಾರಿಗಳು ಜಾಸ್ತಿಯಾಗಿಲ್ಲ, funds ಕೂಡ ಜಾಸ್ತಿಯಾಗಿರುವುದನ್ನು ಕಾಣುತ್ತೇವೆ, ಅದು ಮಿತಿಯೊಳಗಿದೆ. ಇಂಜಿನಿಯರ್‌ಗಳು ಅಷ್ಟು ಸಂಖ್ಯೆಯಲ್ಲಿರಬೇಕೆಂದು ತಾವು defend ಮಾಡಿಕೊಳ್ಳಬೇಡಿ. ಜನಸಂಖ್ಯೆಗೂ ಇಂಜಿನಿಯರ್‌ಗಳ ಸಂಖ್ಯೆಗೂ ಏನು ಸಂಬಂಧ? ಜನಸಂಖ್ಯೆ ಜಾಸ್ತಿಯಾಗುತ್ತದೆ. ಇದರಿಂದ ಮೇಷ್ಟ್ರು ಜಾಸ್ತಿಯಾಗಲಿ, ವೈದ್ಯರು ಜಾಸ್ತಿಯಾಗಲಿ, ಆದರೆ, ಇಂಜಿನಿಯರ್‌ಗಳಿಗೂ ಐಎಎಸ್‌ಗಳಿಗೂ ಏನು ಸಂಬಂಧ?

**ಶ್ರೀ ಜಗದೀಶ್ ಶೆಟ್ಟರ್** : ಇಲಾಖೆಗಳಲ್ಲಿ ಪೆಂಡಿಂಗ್ ಇರುವ ಫೈಲುಗಳೆಲ್ಲವನ್ನೂ ಕ್ಲಿಯರ್ ಮಾಡಬೇಕೆಂದು ವರದಿಯಲ್ಲಿ ತಿಳಿಸಿದ್ದರೂ ಅದನ್ನಾದರೂ ಮಾಡಿದಿರಾ? ಏನು ಮಾಡುತ್ತಿದ್ದೀರಿ?

**ಶ್ರೀ ಕೆ. ಶ್ರೀನಿವಾಸ ಗೌಡ** : ಮಾಡುತ್ತಿದ್ದೇವೆ.

**ಶ್ರೀ ಜಗದೀಶ್ ಶೆಟ್ಟರ್** : ಇಲಾಖೆಗಳಲ್ಲಿ ಫೈಲ್‌ಗಳು ರಾಶಿಯಾಗಿ ಉಳಿದಿವೆ. ಮಂತ್ರಿಗಳೂ ಇಲ್ಲ, ಯಾರೂ ಇಲ್ಲ.

**ಅಧ್ಯಕ್ಷರು** : ಬಹಳ ಚರ್ಚೆಯಾಯಿತು ಮಂತ್ರಿಗಳು ಉತ್ತರ ಹೇಳಿದ್ದಾರೆ. ಮುಂದೆ ಹೋಗೋಣ.

**ಶ್ರೀ ಆರಗ ಜ್ಞಾನೇಂದ್ರ** : ಅನುಷ್ಠಾನಗೊಳಿಸಲು ನಿಜವಾಗಿಯೂ ನಾವು ಒತ್ತಡ ಹೇರಿದ್ದು ಏನೆಂದರೆ, ಕೇಂದ್ರ ಸರ್ಕಾರ ಹೊಸದಾಗಿ ಒಂದು ಬಿಲ್ ತಂದು ಮಂತ್ರಿಗಳ ಸಂಖ್ಯೆಯನ್ನು ಕಡಿಮೆ ಮಾಡಿದರಲ್ಲಾ ಅದು ಅಭಿನಂದನಾರ್ಹವಾದ ಸುಧಾರಣೆ. ಇನ್ನೊಂದು ನೀವು ಮಾಡಿದ್ದು ಏನೆಂದರೆ, ತಾಲ್ಲೂಕು ಕೈಗಾರಿಕಾ ಕೇಂದ್ರಗಳನ್ನು ರದ್ದುಗೊಳಿಸಿದ್ದು. ಹಿಂದೆ ಜನತಾದಳದ ಸರ್ಕಾರ

ಅಧಿಕಾರದಲ್ಲಿದ್ದಾಗ ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆ ಬೆಳೆಯಬೇಕೆಂಬ ಉದ್ದೇಶದಿಂದ ಒಳ್ಳೆಯ ಯೋಜನೆ ಹಮ್ಮಿಕೊಂಡು, ತಾಲ್ಲೂಕುಗಳಲ್ಲಿ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಿತ್ತು. ಈಗ ಆ ತಾಲ್ಲೂಕು ಕೈಗಾರಿಕಾ ಕೇಂದ್ರಗಳನ್ನು ರದ್ದುಗೊಳಿಸುವ ಮೂಲಕ ದೊಡ್ಡ ತೊಂದರೆಯುಂಟು ಮಾಡಿದ್ದೀರಿ. ಕೈಗಾರಿಕೆಗಳು ಮುಚ್ಚಿಹೋಯಿತು. ಇದರ ಪರಿಣಾಮವಾಗಿ, ವ್ಯವಸಾಯ ಮಾಡುವವನು ವ್ಯವಸಾಯ ಮಾಡುತ್ತಾ ಆತ ಹಾಗೆಯೇ ಸಾಯುತ್ತಿರಬೇಕು, ಆತನಿಗೆ ಬೇರಾವುದೇ ಉದ್ಯೋಗ ಸೃಷ್ಟಿಯಾಗಬಾರದೆಂದು ಮಾಡಿದರೆ ಸುಧಾರಣೆಯಾಗುತ್ತದೆಯೇ? ಸುಧಾರಣೆ ಎಂದರೆ, ಯಾವುದನ್ನು ಮಾಡಬೇಕು, ಯಾವುದನ್ನು ಬಿಡಬೇಕೆನ್ನುವ ವಿವೇಚನೆ ಇಲ್ಲದೆ ಮಾಡಿರುವುದರಿಂದ ಸಮಸ್ಯೆಯುಂಟಾಗಿದೆ.

**ಶ್ರೀ ವಾಟಾಳ್ ನಾಗರಾಜ್** : ಒಬ್ಬರೇ ಇಂಜಿನಿಯರ್ ಇರಬೇಕೆಂಬುದು ನನ್ನ ವಾದವಲ್ಲ. ಆದರೆ, ಅಂದಿನಿಂದ ಇಂದಿನವರೆಗೆ ಒಂದು ನುರು ಪಟ್ಟು ಜಾಸ್ತಿ ಮಾಡಿದ್ದೀರಿ. ಜನಸಂಖ್ಯೆ ಆಧಾರದ ಮೇಲೆ ಜಾಸ್ತಿ ಮಾಡಿ, ನನ್ನ ಅಭ್ಯಂತರಯೆನೂ ಇಲ್ಲ. ನೀವು ಒಂದಕ್ಕೆ ನೂರು ಪಟ್ಟು ಜಾಸ್ತಿ ಮಾಡಿದ್ದೀರಿ. ಅದನ್ನು ಕಡಿಮೆಗೊಳಿಸುವುದೇ ಸುಧಾರಣೆ. ನೀವು ವರದಿಯನ್ನು ಸುಮ್ಮನೆ ಇಟ್ಟುಕೊಂಡಿರುವುದಾದರೆ, ಇಲ್ಲವೇ ವರದಿಯನ್ನು ತಿರಸ್ಕರಿಸಿದ್ದೇವೆ, ವರದಿಯಲ್ಲಿರುವಂತೆ ಅನುಷ್ಠಾನಗೊಳಿಸಲು ಸಾಧ್ಯವಾಗುವುದಿಲ್ಲವೆಂದು, ಅದನ್ನಾದರೂ ಹೇಳಿ,

**ಅಧ್ಯಕ್ಷರು** : ಪ್ರಶ್ನೋತ್ತರ ಮುಗಿಯಿತು.

## 4. ಅಧ್ಯಕ್ಷರ ಅಪ್ಪಣೆ ಮೇರೆಗೆ

**ವಿಷಯ** : ಪೊಲೀಸ್ ಅಧಿಕಾರಿಯೊಬ್ಬರು ಶಾಸಕರಿಗೆ ಅಗೌರವ ತೋರಿಸಿ ಹಕ್ಕುಚ್ಯುತಿ ಎಸಗಿರುವ ಕುರಿತು.

**ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** : ಮಾನ್ಯ ಅಧ್ಯಕ್ಷರೆ, ಒಂದು ಹಕ್ಕುಚ್ಯುತಿಗೆ ಸಂಬಂಧಿಸಿದಂತೆ ನಾಣು, ಮಾನ್ಯ ಸದಸ್ಯರುಗಳಾದ ಜೆ.ಸಿ. ಮಾಧುಸ್ವಾಮಿ, ವಾಟಾಳ್ ನಾಗರಾಜ್ ಹಾಗೂ ಇತರರೆತ್ಲರೂ ತಮ್ಮ ಕೊಠಡಿಗೆ ಬಂದು ತಮ್ಮೊಂದಿಗೆ ಚರ್ಚಿಸಿದ್ದೇವೆ. ಹಕ್ಕುಚ್ಯುತಿಗೆ ಸಂಬಂಧಿಸಿದಂತೆ ಏನು ವಿಷಯ ಮಂಡಿಸುತ್ತಿದ್ದೇವೆ, ಇದರ ಉದ್ದೇಶವೇನೆಂದರೆ, ಇತ್ತೀಚೆಗೆ ನಮ್ಮ ಶಾಸಕರುಗಳೊಂದಿಗೆ ಕೆಲವು ಅಧಿಕಾರಿಗಳು ಅದರಲ್ಲೂ ವಿಶೇಷವಾಗಿ ಪೊಲೀಸ್ ಆದಿಕಾರಿಗಳ ವರ್ತನೆ ಹದ್ದುಮೀರಿದೆ. ಇವೊತ್ತು ಮಾನ್ಯ ಶಾಸಕರಾಗಿರುವ ಕಳಷಪ್ಪ ಗುರುಶಾಂತಪ್ಪ ಬಂಡಿಯವರಿಗೆ ಏನಾಯಿತು? ಯಾವುದೋ ಲಾರಿಯನ್ನು ಒಬ್ಬ ಪೋಲೀಸ್ ಅಧಿಕಾರಿ ತಡೆದಾಗ, ಲಾರಿಯವನು ಬಂದು ಸದರಿ ಶಾಸಕರ ಬಳಿ ವಿಷಯ ನಿವೇದಿಸಿದಾಗ, ಶಾಸಕರು ಲಾರಿ ತಡೆದ ಪೊಲೀಸ್ ಅಧಿಕಾರಿಯನ್ನು ಉದ್ದೇಶಿಸಿ, 'ಏಕೆ ಕಿರುಕುಳ ಕೊಡುತ್ತೀರಿ ಎಂದು ಕೇಳಿದ್ದಕ್ಕೆ ಪ್ರತಿಯಾಗಿ ಆ ಪೊಲೀಸ್ ಅಧಿಕಾರಿ, 'ನೀನ್ಯಾರು ಕೇಳೋದಿಕ್ಕೆ? ಹುಷಾರಾಗಿರು!' ಎಂದು ಹೇಳಿದ್ದಾರೆ, ಅವರು ಏನು ಹೇಳಿದ್ದಾನೆಂದರೆ, "ದಿನಾಂಕ 6.7.04ರಂದು ರೋಣ ಸರ್ಕಲ್ ಇನ್ಸ್‌ಪೆಕ್ಟರ್‌ರವರು ಅಮರೇಶ್ ಬಾರ್ಕೆರವರು ರಾತ್ರಿ ಲಾರಿಯೊಂದನ್ನು ತಡೆದು ಅವರಿಗೆ ಅನಗತ್ಯವಾಗಿ ಕಿರುಕುಳ ನೀಡುತ್ತಿದ್ದಾಗ, ಅವರು ನನ್ನನ್ನು ಸಂಪರ್ಕಿಸಿ ವಿಷಯ ತಿಳಿಸಿದಾಗ ನಾಣು ಕೂಡಲೇ ಅವರೊಂದಿಗೆ ಫೋನ್‌ನಲ್ಲಿ ಮಾತನಾಡಿ, ಏಕೆ ಜನರಿಗೆ ಕಿರುಕುಳ ಕೊಡುತ್ತಿದ್ದೀರಿ ಎಂದು ಕೇಲಿದ್ದಕ್ಕೆ ಅದನ್ನು ಕೇಳಲು ನೀನ್ಯಾರು ಎಂದು ನನ್ನನ್ನು ಏಕವಚನದಲ್ಲಿ ದಬಾಯಿಸಿ, ನೀವೇನು ಮಾಡುತ್ತೀರೋ ಮಾಡಿ, ನಾನು ಯಾರಿಗೂ ಹೆದರುವುದಿಲ್ಲ, ನನಗೂ ರಾಜಕೀಯ